ಕಿರುಸುದ್ದಿ

ಮಹದೇಶ್ವರ ಸ್ವಾಮಿ ಹಾಲರವಿ ಉತ್ಸವ

ಮಳವಳ್ಳಿ: ದೀಪಾವಳಿ ಪೂಜಾ ಮಹೋತ್ಸವದ ಅಂಗವಾಗಿ ಪಟ್ಟಣದ ದೊಡ್ಡಕೆರೆ ಸಮೀಪವಿರುವ ಮಲೆಮಹದೇಶ್ವರ ದೇವಸ್ಥಾನ ಹಾಗೂ ತಾಲ್ಲೂಕಿನ ದುಗ್ಗನಹಳ್ಳಿ ಮಹದೇಶ್ವರ ಸ್ವಾಮಿಯ ಹಾಲರವಿ ಉತ್ಸವ ಹಾಗೂ ಎಣ್ಣೆಮಜ್ಜನ ಸೇವೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಕ್ತಪ್ರಧಾನವಾಗಿ ಜರುಗಿತು.

ತಾಲ್ಲೂಕಿನ ತಮ್ಮಡಹಳ್ಳಿ ಬಳಿ ಇರುವ ಹಾಲು ಹಳ್ಳದಲ್ಲಿ ನೀರು ತುಂಬಿದ ಕಳಸ, ಮಹದೇಶ್ವರ ಬಸವಪ್ಪ, ಮಂಟೇಸ್ವಾಮಿ, ಸಿದ್ದಪ್ಪಾಜಿ ಕಂಡಾಯ, ಕರಿಯಣ್ಣ ಕೆಂಚಣ್ಣ ದೇವರು ಸೇರಿದಂತೆ ಇತರೆ ದೇವತೆಗಳ ಹೂವು ಹೊಂಬಾಳೆ ಕಾರ್ಯಕ್ರಮವು ಶ್ರದ್ಧಾಪೂರ್ವಕವಾಗಿ ನಡೆಯಿತು. ಮಂಗಳವಾದ್ಯದೊಂದಿಗೆ ಹಾಲರವಿವೊತ್ತ ಹೆಣ್ಣುಮಕ್ಕಳು, ಮಾದಪ್ಪನ ಗುಡ್ಡಪ್ಪ, ನೀಲಗಾರರು ಉಘೇ ಮಾದಪ್ಪ ಉಘೇ' ಎಂಬ ಜಯಘೋಷಗಳೊಂದಿಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ಆಗಮಿಸಿ ದೇವಾಲಯವನ್ನು ಮೂರು ಬಾರಿ ಪ್ರದಕ್ಷಿಣೆ ಹಾಕಿ, ತಂದ ಪವಿತ್ರ ಹಾಲರವಿ ಜಲದಿಂದ ಗರ್ಭಗುಡಿಯಲ್ಲಿ ಮಾದಪ್ಪನಿಗೆ ವಿಶೇಷ ಮಜ್ಜನ (ಅಭಿಷೇಕ) ನೆರವೇರಿಸಲಾಯಿತು.

ದಾರಿ ಉದ್ದಕ್ಕೂ ಮಾದಪ್ಪನ ಕಾವ್ಯಗಳನ್ನು ಹಾಡುತ್ತಾ ಒಂದೊಂದು ಹೆಜ್ಜೆಯಂತೆ ಬಸವಪ್ಪ ಹಾಗೂ ಕರಗವೊತ್ತ ಅರ್ಚಕರನ್ನು ಬರಮಾಡಿಕೊಳ್ಳುತ್ತಿರುವುದು ಮಾದಪ್ಪನ ಭಕ್ತಿಗೆ ಸಾಕ್ಷಿಯಾಯಿತು.



ಬೆಂಗಳೂರಿನ ಹಲಸೂರಿನಲ್ಲಿರುವ ಸೆಂಟ್ ಆನ್ಸ್ ಮಹಿಳಾ ಪದವಿ ಕಾಲೇಜಿನ ಕನ್ನಡ ವಿಭಾಗ ಮತ್ತು ಚಿಗುರು ಕನ್ನಡ ಸಂಘದಿಂದ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಟ ಯುದಿತ್ ಶೆಟ್ಟಿ, ನಟಿ ಚಂದ್ರಕಲಾ, ನಿರ್ದೇಶಕ ಗುರು ಪ್ರಸಾದ್, ಕಾಲೇಜಿನ ಕಾರ್ಯದರ್ಶಿ ಡಾ.ಮಾರ್ಗರೇಟ್ ಫಾತಿಮಾ ಮೇರಿ, ಪ್ರಾಂಶುಪಾಲೆ ಪ್ರೊ. ನಿಶಾ ಜೋಸೆಫ್ ಭಾಗವಹಿಸಿದ್ದರು.

ಎಚ್‌ಡಿಕೆ ಆರೋಪಕ್ಕೆ ಹಾಸನ ಡಿಸಿ, ಉಸ್ತುವಾರಿ ಸಚಿವರ ಸವಾಲು: ಎಫ್‌ಐಆರ್ ದಾಖಲು

ಲಂಚಾರೋಪದಲ್ಲಿ ಸಿಲುಕಿದ ಜಿಲ್ಲಾಡಳಿತ

ಹಾಸನ: ಜಿಲ್ಲಾಧಿಕಾರಿ ಕಚೇರಿಯಲ್ಲಿ ಲಂಚದ ಬೇಡಿಕೆ ನಡೆದಿದೆ ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಗಂಭೀರ ಆರೋಪ ಇದೀಗ ಹಾಸನ ಜಿಲ್ಲೆಯ ರಾಜಕೀಯ ವಲಯದಲ್ಲಿ ಹೊಸ ಸಂಚಲನ ಮೂಡಿಸಿದೆ. ಆರೋಪಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರ ಆಪ್ತ ಸಹಾಯಕ ಶಶಿಕಿರಣ್ ಅವರು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ವಾಟ್ಸಾಪ್ ಸಂದೇಶದ ವಿರುದ್ಧ ದೂರು: ಜಿಲ್ಲಾಧಿಕಾರಿ ಅವರ ಪಿಎ ಶಶಿಕಿರಣ್ ಅವರು ತಮ್ಮ ಮೊಬೈಲ್ ಸಂಖ್ಯೆಯನ್ನು ಬಳಸಿಕೊಂಡು ನಕಲಿ ವಾಟ್ಸಾಪ್ ಸಂದೇಶಗಳನ್ನು ಸೃಷ್ಟಿಸಿ ಹರಡಲಾಗುತ್ತಿದೆ. ಇದರಿಂದ ತಮ್ಮ ವೈಯಕ್ತಿಕ ವರ್ಚಸ್ಸು ಹಾಗೂ ಆಡಳಿತಾತ್ಮಕ ಗೌರವಕ್ಕೆ ಧಕ್ಕೆಯಾಗುತ್ತಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಸಂದೇಶಗಳಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಉಸ್ತುವಾರಿ ಸಚಿವರು, ಅರಸೀಕೆರೆ ತಹಶೀಲ್ದಾರ್ ಸೇರಿದಂತೆ ಎಸಿ, ಎಡಿಸಿ ಕಚೇರಿಯ ಸಿಬ್ಬಂದಿ ಹೆಸರನ್ನು ಉಲ್ಲೇಖಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಈ ದೂರಿನ ಆಧಾರದ ಮೇಲೆ ಬಿಎನ್‌ಎಸ್ ಕಾಯ್ದೆಯ ಸೆಕ್ಷನ್ 336(4) ಮತ್ತು 335ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಪ್ರಕರಣದ ತನಿಖೆಯ ಭಾಗವಾಗಿ ಶಶಿಕಿರಣ್ ಅವರ ಮೊಬೈಲ್ ನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಡಿಸಿ ಸ್ಟೇಟಸ್‌ನಿಂದ ಹೊಸ ಚರ್ಚೆ: ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ತಮ್ಮ ವಾಟ್ಸಾಪ್ ಹಾಗೂ ಎಕ್ಸ್ (ಟ್ವಿಟರ್) ಖಾತೆಯಲ್ಲಿ ಸಿಂಹವೊಂದು ಮಲಗಿರುವಾಗ ನಾಯಿಗಳು ಬೊಗಳುತ್ತಿರುವ ಕಾರ್ಟೂನ್ ಮಾದರಿಯ ಚಿತ್ರವನ್ನು ಹಂಚಿಕೊಂಡಿರುವ ಅವರು, 'ಪ್ರತಿಯೊಂದು ಧ್ವನಿಯೂ ಪ್ರತಿಕ್ರಿಯೆಗೆ (Not every noise deserves a response) ಎಂಬ ಸಂದೇಶವನ್ನು ಪ್ರಕಟಿಸಿದ್ದಾರೆ.

ಇತ್ತೀಚೆಗೆ ತಮ್ಮ ವಿರುದ್ಧ ಲಂಚದ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಉದ್ದೇಶಿಸಿಯೇ ಈ ಸ್ಟೇಟಸ್ ಹಾಕಲಾಗಿದೆಯೇ ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆಯುತ್ತಿದೆ. ಆದರೆ ಜಿಲ್ಲಾಧಿಕಾರಿ ಈ ಕುರಿತು ಯಾವುದೇ ಸ್ಪಷ್ಟನೆ ನೀಡಿಲ್ಲ.



ಡಿಸಿ ವಿರುದ್ಧ ಬಿ. ಶಿವರಾಂ ಆಕ್ರೋಶ

ಕಾಂಗ್ರೆಸ್‌ನ ಹಿರಿಯ ಮುಖಂಡ ಹಾಗೂ ಮಾಜಿ ಸಚಿವ ಬಿ. ಶಿವರಾಂ ಕೂಡ ಜಿಲ್ಲಾಧಿಕಾರಿ ಕಾರ್ಯವೈಖರಿ ವಿರುದ್ಧ ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜಿಲ್ಲಾಧಿಕಾರಿ ಅವರು ಸಚಿವರು ಹೇಳಿದ ಕೆಲಸಗಳನ್ನೂ ಮಾಡುತ್ತಿಲ್ಲ. ಉದ್ಧಟತನದಿಂದ ವರ್ತಿಸುತ್ತಿದ್ದಾರೆ ನಾವು ಸರ್ಕಾರದ ಭಾಗವಾಗಿದ್ದು, ಜಿಲ್ಲೆಯ ಆಡಳಿತ ಅಧಿಕಾರಿಗಳ ಕೈಯಲ್ಲಿ ಇರಬಾರದು, ಸಚಿವರ ಕೈಯಲ್ಲಿರಬೇಕು. ಸಚಿವರು ಪ್ರತಿಯೊಂದು ಕೆಲಸಕ್ಕೂ ಜಿಲ್ಲಾಧಿಕಾರಿ ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಕೇಳುವ ಪರಿಸ್ಥಿತಿ ಇರಬಾರದು. ಅಧಿಕಾರಿಗಳಿಗೆ ಸಚಿವರು ಆದೇಶ ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಆರೋಪ ಸಾಬೀತುಪಡಿಸಲು ಎಚ್‌ಡಿಕೆಗೆ ಒತ್ತಾಯ

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ನೇರ ಸವಾಲು ಹಾಕಿ ವಾಟ್ಸಾಪ್ ಚಾಟ್ ಗಳಲ್ಲಿ ಉಲ್ಲೇಖಿಸಿರುವಂತೆ ತಮ್ಮ ಮತ್ತು ಜಿಲ್ಲಾಧಿಕಾರಿ ನಡುವೆ 75 ಲಕ್ಷ ರೂ. ಲಂಚದ ವ್ಯವಹಾರ ನಡೆದಿರುವುದಕ್ಕೆ ಸಾಕ್ಷ್ಯಾಧಾರಗಳಿದ್ದರೆ ಪ್ರಕರಣ ದಾಖಲಿಸಿ ತನಿಖೆ ನಡೆಸಲಿ. ಆರೋಪ ಸಾಬೀತಾದರೆ ಯಾವುದೇ ಶಿಕ್ಷೆಗೂ ಸಿದ್ಧನಿದ್ದೇನೆ ಎಂದರು. 'ಕುಮಾರಣ್ಣ, ನಾನು ನಿಮ್ಮೊಂದಿಗೆ 20 ವರ್ಷ ಇದ್ದವನು. ನಿಮ್ಮ ಬಗ್ಗೆ ನನಗೆ ವಿಶ್ವಾಸವಿದೆ. ನಾನು ಮಂತ್ರಿಯಾದೆ ಎಂಬ ಅಸೂಯೆಯಿಂದ ನಾಲ್ಕೇ ತಿಂಗಳಲ್ಲಿ ಇಂತಹ ಆರೋಪ ಮಾಡುವುದು ನಿಮಗೆ ಶೋಭೆ ತರುವುದಿಲ್ಲ ಎಂದರು.

ಶಿಸ್ತುಕ್ರಮಕ್ಕೆ ರೇವಣ್ಣ ಆಗ್ರಹ

ಜಿಲ್ಲಾಧಿಕಾರಿ ವಿರುದ್ಧದ ಆರೋಪ ಹಾಗೂ ಸಾಮಾಜಿಕ ಜಾಲತಾಣದ ಸ್ಟೇಟಸ್ ವಿಚಾರವಾಗಿ ಮಾಜಿ ಸಚಿವ ಎಚ್.ಡಿ. ರೇವಣ್ಣ ಕೂಡ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. ಸೋಮವಾರ ಸುದ್ದಿಗೋಷ್ಠಿಯಲ್ಲಿ



ಮಾತನಾಡಿದ ಅವರು, ಯಾರೇ 10 ರೂ. ಲಂಚ ಕೇಳಿದರೂ ನನಗೆ ಕರೆ ಮಾಡಿ ಎಂದು ಮುಖ್ಯಮಂತ್ರಿ ಹೇಳಿದ್ದರು. ಈಗ ಜಿಲ್ಲಾಧಿಕಾರಿ ಕಚೇರಿಯಲ್ಲಿ ಲಕ್ಷಾಂತರ ರೂ. ಲಂಚಕ್ಕೆ ಬೇಡಿಕೆ ಇಟ್ಟಿರುವ ಗಂಭೀರ ಆರೋಪ ಕೇಳಿಬಂದಿದೆ. ಈ ಬಗ್ಗೆ ತನಿಖೆ ನಡೆಸುವಂತೆ ಕುಮಾರಸ್ವಾಮಿ ಒತ್ತಾಯಿಸಿರುವುದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಐಎಎಸ್ ಅಧಿಕಾರಿಗಳು ಉನ್ನತ ನೈತಿಕ ಮೌಲ್ಯಗಳನ್ನು ಕಾಪಾಡಿಕೊಳ್ಳಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ರೀತಿಯಲ್ಲಿ ವರ್ತಿಸಿದರೆ ಶಿಸ್ತು ಕ್ರಮ ಕೈಗೊಳ್ಳಲು ಅವಕಾಶವಿದೆಂದರು.

ಎಳನೀರು ಮಾರುಕಟ್ಟೆ ಅಭಿವೃದ್ಧಿಗೆ ಶಾಸಕರ ಸಹಕಾರ

ಚನ್ನರಾಯಪಟ್ಟಣ: ಎಳನೀರು ಮಾರುಕಟ್ಟೆಯ ಅಭಿವೃದ್ಧಿ ಹಾಗೂ ವರ್ತಕರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಶಾಸಕ ಸಿ.ಎನ್. ಬಾಲಕಷ್ಣ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಮಾರುಕಟ್ಟೆಗೆ ವೇಬ್ರಿಡ್ಜ್ ಸೇರಿದಂತೆ ಅಗತ್ಯ ಸೌಲಭ್ಯ ಗಳನ್ನು ಅತಿ ಶೀಘ್ರದಲ್ಲಿ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯ ಸಂಘಟನಾ ಕಾರ್ಯದರ್ಶಿ ಜಗದೀಶ್ ತಿಳಿಸಿ ದರು.

ಶ್ರೀ ಬಾಹುಬಲಿ ಎಳನೀರು ವರ್ತಕರ ಸಂಘದ 2026–28ನೇ ಸಾಲಿನ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ಭಾನುವಾರ ನಡೆದಿದ್ದು, ನೂತನ ಪದಾಧಿಕಾರಿಗಳ ಆಯ್ಕೆಯ ಬಳಿಕ ಮಾತನಾಡಿದ ಅವರು, ಶ್ರವಣಬೆಳಗೊಳದ ಎಳನೀರು ಮಾರು ಕಟ್ಟೆಯು ಸ್ಥಳೀಯ ವರ್ತಕರು ಹಾಗೂ ರೈತರ ಪಾಲಿಗೆ ಪ್ರಮುಖ ವಾಣಿಜ್ಯ ಕೇಂದ್ರವಾಗಿದೆ. ಇಲ್ಲಿಗೆ ಪ್ರತಿನಿತ್ಯ ವಿವಿಧ ಗ್ರಾಮಗಳಿಂದ ಎಳನೀರು ಮಾರಾಟಕ್ಕಾಗಿ



ವರ್ತಕರು ಬರುತ್ತಾರೆ. ಹೀಗಾಗಿ ಮಾರುಕಟ್ಟೆಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಅತ್ಯಗತ್ಯವಾಗಿದೆ ಎಂದರು.ಮಾರುಕಟ್ಟೆಯಲ್ಲಿ ವೇಬ್ರಿಡ್ಜ್ ವ್ಯವಸ್ಥೆ ಕಲ್ಪಿಸುವು ದರಿಂದ ಎಳನೀರು ವ್ಯಾಪಾರಕ್ಕೆ ಅನುಕೂಲವಾಗ ಲಿದೆ. ಜತೆಗೆ ವರ್ತಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತರಲಾಗಿದ್ದು, ಅವುಗಳನ್ನು ಹಂತ ಹಂತವಾಗಿ ಪರಿಹರಿಸುವುದಾಗಿ ಶಾಸಕ ಸಿ.ಎನ್.ಬಾಲಕೃಷ್ಣ ಭರವಸೆ ನೀಡಿದ್ದಾರೆ. ವರ್ತಕರ ಸಂಘದ ಪದಾಧಿಕಾರಿಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಮಾರುಕಟ್ಟೆಯ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಹೇಳಿದರು.

ಸಂಘದ 2026–28ನೇ ಸಾಲಿನ ಅಧ್ಯಕ್ಷರಾಗಿ ಬಸವರಾಜ್ ದಮ್ಮನಿಂಗಳ, ಗೌರವಾಧ್ಯಕ್ಷರಾಗಿ ಎ.ಎಸ್.ಯೋಗೇಶ್, ಉಪಾಧ್ಯಕ್ಷರಾಗಿ ಆರ್.ಸಿ.ಪ್ರತಾಪ್, ಕಾರ್ಯದರ್ಶಿಯಾಗಿ ಸಂತೋಷ್ ಕೋಡಿ ಹಾಗೂ ಖಜಾಂಚಿಯಾಗಿ ಎಂ.ಕೆ.ಪುನೀತ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಹಿಂದಿನ ಅವಧಿಯಲ್ಲಿ ಸೇವೆ ಸಲ್ಲಿಸಿದ ಅಧ್ಯಕ್ಷ ಡಿ.ಬಿ.ಮಂಜುನಾಥ್, ಗೌರವಾಧ್ಯಕ್ಷ ಕೊತ್ತನಘಟ್ಟ ಸಂತೋಷ್, ಉಪಾಧ್ಯಕ್ಷ ಎಸ್.ಸತೀಶ್, ಕಾರ್ಯದರ್ಶಿ ದಮ್ಮನಿಂಗಳ ಕುಮಾರ್ ಹಾಗೂ ಶ್ರವಣಬೆಳಗೊಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಲಕ್ಷ್ಮೀಗೌಡ ಪುಟ್ಟೇಗೌಡ ಅವರನ್ನು ನೂತನ ಪದಾಧಿಕಾರಿಗಳು ಸನ್ಮಾನಿಸಿ ಗೌರವಪೂರ್ವಕವಾಗಿ ಬೀಳ್ಕೊಟ್ಟರು.

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಕೃಷ್ಣರಾಜಪೇಟೆ
ಮಂಡ್ಯ ಜಿಲ್ಲೆ–571426
ಸಂ: MDC-JHMOMAG2/1/2026-JUD SEC-DC MANDYA

ಪ್ರಕಟಣೆ

ಕರ್ನಾಟಕ ರಾಜ್ಯದ ಮೈಸೂರು, ಕೊಡಗು, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಖನಿಜ ಸಂಪನ್ಮೂಲಗಳ ಪತ್ತೆಗಾಗಿ ಮಲ್ಟಿ ಸೆನ್ಸರ್ ವೈಮಾನಿಕ ಸಮೀಕ್ಷೆಯನ್ನು ಕೈಗೊಳ್ಳಲಿದ್ದು ದಿನಾಂಕ 02.11.2026 ರಿಂದ 20.12.2026ರವರೆಗೆ ವಿಮಾನವು ಕಡಿಮೆ ಎತ್ತರದಲ್ಲಿ ಹಾರಾಟ ನಡೆಸುವುದರಿಂದ ಸಾರ್ವಜನಿಕರಲ್ಲಿ ಅನಗತ್ಯ ಆತಂಕ ಗೊಂದಲ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಆತಂಕ ಪಡಬೇಕಾಗಿರುವುದಿಲ್ಲ ಎಂದು ಈ ಪ್ರಕಟಣೆ ಮೂಲಕ ಸೂಚಿಸಲಾಗುತ್ತಿದೆ.

ದಿನಾಂಕ: 05.11.2026 ಸಹಿ/– ಮುಖ್ಯಾಧಿಕಾರಿ

ರಸ್ತೆ ಮಗ್ಗುಲಲ್ಲೇ ವ್ಯಾಪಾರ: ವಾಹನ ಸಂಚಾರಕ್ಕೆ ಅಡ್ಡಿ

ವಾರದ ಸಂತೆಗೆ ಸ್ಥಳದ ಅಭಾವ

ಬೇಲೂರು: ವಿಶ್ವವಿಖ್ಯಾತ ಶ್ರೀಚನ್ನಕೇಶವ ಸ್ವಾಮಿ ದೇವಾಲಯದ ನಾಡು ಬೇಲೂರು. ಹೊಯ್ಸಳರ ಶಿಲ್ಪಕಲೆಯ ವೈಭವ ನೋಡಲು ದಿನವೂ ನೂರಾರು ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಆದರೆ, ಸೋಮವಾರ ಬಂದರೆ ಪರಿಸ್ಥಿತಿಯೇ ಬೇರೆ.ದೇವಸ್ಥಾನದ ಮುಖ್ಯ ರಸ್ತೆಯೇ ಸಂತೆ ಆಗಿ ಬಿಡುತ್ತದೆ. ವಾಹನ ಸವಾರರು, ಪ್ರವಾಸಿಗರು ರಸ್ತೆಯಲ್ಲಿ ಹೋಗು ವುದೋ ಬಿಡುವುದೋ ಎಂಬ ಚಿಂತೆಯಲ್ಲಿ ಸಿಲುಕಿಕೊಳ್ಳುತ್ತಾರೆ.

ವಾರದ ಸಂತೆಯ ದಿನವಾದ ಸೋಮವಾರ ಬೆಳಗ್ಗೆ ಆಗುತ್ತಿದ್ದಂತೆ ದೇವಸ್ಥಾನದ ರಸ್ತೆಯ ಎರಡೂ ಬದಿಗಳಲ್ಲಿ ಮನಬಂದಂತೆ ತರಕಾರಿ ಅಂಗಡಿಗಳು ತಲೆ ಎತ್ತು ತ್ತವೆ. ರೈತರು,ವ್ಯಾಪಾರ ಸ್ಥರು ತಾವು ಬೆಳೆದ ತರಕಾರಿ, ಹೂವು, ಹಣ್ಣುಗಳನ್ನು ತಂದು ಟಾರ್ಪಲ್ ಗುಡಾರಗಳನ್ನು ಕಟ್ಟಿ,ರಸ್ತೆಯನ್ನೇ ಅಂಗಡಿ ಮಾಡಿಕೊಳ್ಳುತ್ತಾರೆ .

ರಸ್ತೆಯಲ್ಲೇ ಅಂಗಡಿ ಇಡುವುದರಿಂದ ರಸ್ತೆ ಕಿರಿದಾಗು ತ್ತದೆ. ಒಂದು ಕಡೆ ವ್ಯಾಪಾರಸ್ಥರು, ಮತ್ತೊಂದು ಕಡೆ ಗ್ರಾಹಕರು. ಇವರ ಮಧ್ಯೆ ವಾಹನ ಸವಾರರು ನುಗ್ಗಿ ಹೋಗಬೇಕಾದ ಪರಿಸ್ಥಿತಿ. ಬೈಕ್, ಕಾರು, ಬಸ್, ಆಟೋ ಎಲ್ಲವೂ ಒಂದರ ಹಿಂದೆ ಒಂದರಂತೆ ಸಾಲುಗಟ್ಟಿ ನಿಲ್ಲುತ್ತವೆ. ಹಾರ್ನ್ ಸದ್ದು, ಜನರ ಗದ್ದಲ, ಟ್ರಾಫಿಕ್ ಜಾಮ್ ಬೇಲೂರಿನಲ್ಲಿ ಸೋಮವಾರದಸಾಮಾನ್ಯ ದೃಶ್ಯವಾಗಿದೆ.**ಪ್ರವಾಸಿಗರಿಗೆ**



ದೂರದ ಊರುಗ ಳಿಂದ, ವಿದೇಶಗಳಿಂದ ದೇವಸ್ಥಾನ ನೋಡಲು ಬರುವ ಪ್ರವಾಸಿಗರಿಗೆ ಇದು ದೊಡ್ಡ ಮುಜುಗರ. ದೇವಸ್ಥಾನಕ್ಕೆ ಹೋಗುವ ದಾರಿಯಲ್ಲೇ ಸಂತೆ. ದೇವರ ದರ್ಶನಕ್ಕೆ ಹೋಗುವ ಭಕ್ತರು ಸಂತೆ ಜನಜಂಗುಳಿಯ ನಡುವೆ ನಡೆದು ಹೋಗ ಬೇಕು. ಪಾರ್ಕಿಂಗ್ ಮಾಡಲು ಜಾಗ ವಿಲ್ಲ. ದೇವಸ್ಥಾನದ ಸೌಂದ ರ್ಯ,ಪರಿಸರದ ಸ್ವಚ್ಛತೆಗೂ ಧಕ್ಕೆಯಾಗುತ್ತಿದೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸುತ್ತಾರೆ.

ಇದಕ್ಕೆ ಮೂಲ ಕಾರಣ ಬೇಲೂರಿನಲ್ಲಿ ವಾರದ ಸಂತೆಗೆ ಸೂಕ್ತವಾದ ಸ್ವಂತ ಸ್ಥಳವಿಲ್ಲದಿರು ವುದು.ವರ್ಷಗಳಿಂದಲೂ ಸಂತೆ ಇದೇ ರಸ್ತೆ ಯಲ್ಲೇ ನಡೆಯುತ್ತಾ ಬಂದಿದೆ. ರೈತರಿಗೂ ಬೇರೆ ದಾರಿಯಿಲ್ಲ, ತಾವು ಬೆಳೆದ ಬೆಳೆಯನ್ನು ಮಾರಲು ಅವರಿಗೆ ಇದೇ ರಸ್ತೆ ಅನುಕೂಲ. ಸಂತೆ ಬಂದ್ ಮಾಡಿ ಎಂದರೆ ರೈತರ ಬದುಕಿಗೆ ತೊಂದರೆ. ಸಂತೆ ಹೀಗೆ ಮುಂದುವರೆಸಿದರೆ ಸಾರ್ವಜನಿಕರಿಗೆ ತೊಂದರೆ ಯಾಗಲಿದೆ.

IN THE COURT OF THE PRINCIPAL CIVIL JUDGE AND J.M.F.C. AT: - CHIKKABALLAPURA
O.S.No. 571/2026

Between: Smt. Pilomina W/o Late Selvaraj D/o Late Bethlam, Aged about 78 years, Residing at 2nd Cross, 4th main road, Abyappa Layout, N.S Palya, B.T.N 2nd stage, Bannerughatta Road, Bengaluru-560076 ..... Plaintiff
And Sri. Anthony Swamy and others ..... Defendants
PAPER DRAFT
Address of Lr' of Defendant No. 1(b)
b) Sri. Sunil, Aged about 32 years, S/o Late Anthony Swamy, Residing at No.32/2, 1st main road, 1st cross, Okalipuram, Near Raju Medicals, Bangalore North-560021

Whereas, the Plaintiff above named filed the above suit against father of this Defendant along with other defendants recently his father was passed away hence above mentioned Defendant arrived as Lr' of Defendant no.1(b) being son of 1st Defendant of the above suit the present suit is for partition and separate possession of plaint schedule properties are agricultural land bearing Sy No.38/1 (Old Sy No.38) an extent of 20 guntas situated at Arekere Village, Kasaba Hobali, Chikkaballapura Taluku and District bounded, East by; Land of C.G. Muridhar, West by; Land of Krishnappa, North by; Land of Balaraju, South by; Road, and agricultural land bearing Sy No. 43/5A (Old Sy.No.43/5) total an extent of 1 acre 07 guntas out 1 acre 02 Guntas situated at Arekere Village, Kasaba Hobali, Chikkaballapura Taluku and District bounded, East by: Land of sarasavathi W/o Chandrashekar West by: Land of Arker Venkatappa, North by: Land of Gangappa, South by: Land of Anthony Swamy S/o papanna, and Sy No Old 29 total an extent of 2 acre 39 guntas out 2 acre 19 Guntas newly phoded as Sy.No.29/2, 29/3, 29/4, and 29/5 situated at Nallenahalli Village, Kasaba Hobali, Chikkaballapura Taluku and District bounded, East by: Land of Gabriel S/o Anthorappa, West by: Land of Private property, North by: Land of Jyothi, South by: Kaluve, this survey numbers are arrived as item No.1 to 3 in the said these suit schedule properties are situated at Arekere and Nallenahalli Village, Kasaba Hobali, Chikkaballapura Taluku and District and. That the above said plaintiff initiated the civil proceedings in the above case against you before the Hon'ble court which is mentioned in the above cause title, therefore you are also necessary party along with the other defendants, hence take this notice you as Lr' of Defendant no.1(b) and also hereby summoned to appear before this Hon'ble court in person or through an advocate to defend the above case on dated 19/11/2026 for 11 'O' clock.

If you failed to appear on that day the above case will be heard and decided ex-party.

By order of the Court
Chief Ministerial Officer, Prl. Civil Judge and J.M.F. Court, Chikkaballapur-562101
Advocate for plaintiff: **Sri. S.V. SRIDHAR,** Advocate, Office at #5, 3rd floor, DNV Building, Opposite BIAAPA Office, Sulibele Road, Devanahalli Town, Devanahalli, Bengaluru District.

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮದ್ದೂರು
ಜಿ & ಡಬ್ಲ್ಯೂ ಸಂಖ್ಯೆ : 05/2025

ಅರ್ಜಿದಾರರು: 1) ಧನುಶ್ರೀ ಬಿನ್ ಲೇಟ್ ಬಾಬು, ವಯಸ್ಸು ಸುಮಾರು 12 ವರ್ಷ, ಮೈನರ್ ಆಗಿದ್ದು, ಇವರ ಗಾರ್ಡಿಯನ್ ಹಾಗೂ ನೈಸರ್ಗಿಕ ಸಂರಕ್ಷಕ ಪಾಲಕರಾಗಿ ಸೋದರ ಅತ್ತೆಯಾದ 2ನೇ ಅರ್ಜಿದಾರರು.
2) ಪ್ರಭಾವತಿ ಎಸ್.ಡಿ. ಕೋಂ ಬೆಟ್ಟಯ್ಯ, ವಯಸ್ಸು ಸುಮಾರು 41 ವರ್ಷ, ಅರ್ಜಿದಾರರಾದ 1 ಮತ್ತು 2 ರವರ ವಾಸ: ಸೋಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.
: ವಿರುದ್ಧ :
ಎದುರುದಾರರು : ಯಾರೂ ಇಲ್ಲ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ಪ್ರಕರಣದಲ್ಲಿ 1ನೇ ಅರ್ಜಿದಾರರನ್ನು 2ನೇ ಅರ್ಜಿದಾರರು ತಮ್ಮನ್ನು ಕಾನೂನಾತ್ಮಕ ಗಾರ್ಡಿಯನ್ ಆಗಿ ನೇಮಕ ಮಾಡುವಂತೆ ಕೋರಿ ಮಾನ್ಯ ನ್ಯಾಯಾಲಯದಲ್ಲಿ ಗಾರ್ಡಿಯನ್‌ಶಿಪ್ ಸರ್ಟಿಫಿಕೇಟ್ (Guardianship Certificate) ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಮೇಲ್ಕಂಡ ಅರ್ಜಿಗೆ ಸಂಬಂಧಿಸಿದಂತೆ ಯಾರಾದರೂ ಹಿತಾಸಕ್ತಿಯುಳ್ಳ ವ್ಯಕ್ತಿಗಳು ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ 26–11–2026ರಂದು ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗುವುದು. ತಪ್ಪಿದ್ದಲ್ಲಿ ಈ ಅರ್ಜಿಗೆ ತಕರಾರು ಬರದಿದ್ದ ಪಕ್ಷದಲ್ಲಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತದೆ ಎಂದು ತಿಳಿಯುವುದು.

ಈ ಪ್ರಕಟಣೆಯನ್ನು ನ್ಯಾಯಾಲಯದ ಅಪ್ಪಣೆ ಮತ್ತು ಮೊಹರಿನೊಂದಿಗೆ ದಿನಾಂಕ 05–11–2026ರಂದು ನೀಡಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮದ್ದೂರು
ಅರ್ಜಿದಾರರ ಪರ ವಕೀಲರು: ನಿತಿನ್ ಕುಮಾರ್ ಬಿ.ಸಿ., ಮದ್ದೂರು

IN THE COURT OF SCCH 17 AT BANGALORE
MVC No: 1487/2026
PETITIONER: Govindaraju
-V/S-
RESPONDENT: Abhirud B. & another.
NOTICE TO RESPONDENT NO.1
Abhirud B. S/o Boraiah, R/at: No. 3D, Sri Rampura Village, Muneshwara Temple Road, Yalahanka Hobli, Bengaluru-560064 (owner of the Yamaha vehicle bearing reg.no: KA-05-LM-8965)

Whereas the above named petitioners have filed the petition against respondents for seeking the relief for road traffic accident.

Take notice that the petitioner has filed the above case against you and other respondents for claiming compensation of Rs 20,00,000/- for the injured/Death in the Road Traffic Accident, In RTA occurred. On 29-12-2025 at about 08-45 PM, when your Insured Yamaha Vehicle bearing reg.no: KA-05-LM-8965, hit the petitioner Govindaraju. Due to that Govindaraju sustained injuries Near Holy Cresent School, Magadi Road, Ramanagara Town and Taluk, Bengaluru South Dist.

You are by Summoned to appear before this Hon'ble Court in person or pleader on 05-12-2026 Day of 11-00 AM, if you fail to appear the above case will be decided exparte.

Issued as per the order and seal of this Hon'ble court on this Day of 02-11-2026 with the seal of this Hon'ble court.

By Order of the Court,
Assistance Registrar, Court of Small Causes, Bengaluru.
Advocate for petitioner:
Hemanth, Advocate, Opp. British liquors, Ramanagara Town, Ramanagara.
Bengaluru. Date: 02-11-2026

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ.
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಶಿವಮೊಗ್ಗ.
ಸಂ: ಕಾಇಂ/ಪಂರಾಇಂ/ವಿಶಿ/ಸ.ಇಂ–2/2026–27/1560 ದಿ: 09.11.2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಶಿವಮೊಗ್ಗ ಇವರು KW-3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2026–27ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಕಾಮಗಾರಿ,

1. ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 09–11–2026 ರಿಂದ 25–11–2026 ರವರೆಗೆ **2**. ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 25–11–2026 ಸಮಯ 16:00:00 **3**. ಬಿಡ್ ತೆರೆಯುವ ದಿನಾಂಕ: 26–11–2026 ಸಮಯ 16:30:00

1. General Works: RDPR/2026-27/BD/WORK_INDENT30017

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು " ಕೆ.ಪಿ.ಪಿ.ಪಿ ವೆಬ್‌ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08182/222936 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ help desk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26–27/41/11/1087

ಮುಂದಿನ ಪೀಳಿಗೆಗೆ ಕೃತಿ ಮಾರ್ಗದರ್ಶಿ

ಹೊಳೆನರಸೀಪುರ: ಸಾಧಕರ ಬದುಕಿನ ಅನುಭವ, ಸಾಧನೆ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ದಾಖಲಿಸುವ ಸಾಹಿತ್ಯ ಕೃತಿಗಳು ಮುಂದಿನ ಪೀಳಿಗೆಗೆ ಉತ್ತಮ ಮಾರ್ಗದರ್ಶನ ನೀಡುತ್ತವೆ ಎಂದು ಮಾಜಿ ಸಚಿವ ಹಾಗೂ ಹೊಳೆನರಸೀಪುರ ಶಾಸಕ ಎಚ್.ಡಿ. ರೇವಣ್ಣ ಅಭಿಪ್ರಾಯಪಟ್ಟರು.

ಪಟ್ಟಣದ ಶಿಕ್ಷಕರ ಭವನದಲ್ಲಿ ನಡೆದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಹಾಗೂ ಸಾಹಿತಿ ಎಂ.ಜಿ. ಪರಮೇಶ್ ಮಡಬಲು ರಚಿಸಿರುವ 'ಸಾಧಕರ ಹೆಜ್ಜೆ ಗುರುತುಗಳು' ಕೃತಿಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿ, ಲೇಖಕ ಪರಮೇಶ್ ಮಡಬಲು ಈಗಾಗಲೇ 13 ಕೃತಿಗಳನ್ನು ರಚಿಸಲಾಗಿದೆಂದರು.ಪ್ರಸ್ತುತ ಲೋಕಾರ್ಪಣೆಗೊಂಡಿರುವ ಕೃತಿಯಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಮೌಲ್ಯಗಳನ್ನು ಒಳಗೊಂಡ ಸುಮಾರು 43 ಲೇಖನಗಳಿವೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಸಾಹಿತ್ಯಾಸಕ್ತ ಓದುಗರಿಗೆ ಉಪಯುಕ್ತವಾಗುವಂತಹ ವಿಚಾರಗಳನ್ನು ಈ ಕೃತಿ ಒಳಗೊಂಡಿದೆಂದರು.

ಅರಕಲಗೂಡು ಶಾಸಕ ಎ. ಮಂಜು ಸೇರಿದಂತೆ ಗಣ್ಯರು ಲೇಖಕರ ಸಾಹಿತ್ಯ ಸೇವೆಯನ್ನು ಪ್ರಶಂಸಿಸಿದರು. ಅಭಿಪ್ರಾಯಪಟ್ಟರು. ಸಾಹಿತಿ ಟಿ.ಎಚ್. ಅಪ್ಪಾಜಿಗೌಡ ಇದ್ದರು.

ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು. ದೂರವಾಣಿ: 080–22255210
ಸಂಖ್ಯೆ: ಕಾಅ/ಕವಿ.1/ಎಇ–2/ಎಇ–1/2026–27/34 ದಿನಾಂಕ: 06.11.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

ಮೇಲ್ಕಂಡ ಇಲಾಖೆಯ ವಿವಿಧ **ಸೂಚಿತ ಸ್ಥಳಗಳಲ್ಲಿ ಹೌಸ್ ಕೀಪಿಂಗ್, ಒಳಚರಂಡಿಯ ವಾರ್ಷಿಕ ನಿರ್ವಹಣೆ, ನೀರು ಸರಬರಾಜು, ಕಾರ್ಪೆಂಟರಿ, ವರ್ಕ್ ಸ್ಟೇಷನ್‌ಗಳನ್ನು ಒದಗಿಸುವುದು, ಪಾರ್ಟೀಷನ್ ಒದಗಿಸುವುದು, ಪಾಲಿಶಿಂಗ್ ಒದಗಿಸುವುದು, ಪೇಂಟಿಂಗ್, ಕಾರ್ಪೆಟ್ ಒದಗಿಸುವುದು, ಹೊಸ ಹುಲ್ಲುಹಾಸನ್ನು ಅಭಿವೃದ್ಧಿಪಡಿಸುವುದು, ಲ್ಯಾಂಡ್ ಸ್ಕೇಪಿಂಗ್, ಸ್ಲ್ಯಾಬ್‌ನಲ್ಲಿ ಹಾಳಾಗಿರುವ ಹಾಗೂ ಹೊರಗೆ ಬಂದಿರುವುದನ್ನು ತೆಗೆದು ಪ್ಲಾಸ್ಟರಿಂಗ್‌ಮಾಡುವುದು, ತುಕ್ಕುಹಿಡಿದ ಸ್ಟೀಲ್‌ನ್ನು ಸರಿಪಡಿಸುವುದು, ಫಾಲ್ಸ್ ಸೀಲಿಂಗ್‌ನ ದುರಸ್ತಿ, ಜನರಲ್ ಡಿಸಿನ್‌ಫೆಕ್ಷನ್ ಒದಗಿಸುವುದು, ಟರ್ಮೈಟ್ ಟ್ರೀಟ್‌ಮೆಂಟ್ ಮರಗೆಲಸಗಳು, ವಾಟರ್ ಪ್ರೂಫಿಂಗ್ ಒದಗಿಸುವುದು, ಪಾರ್ಟೀಷನ್ ಒದಗಿಸುವುದು, ಪುರುಷರ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯಗಳನ್ನು ನಿರ್ಮಿಸುವುದು, ವುಡನ್ ಕ್ಯಾಬಿನೆಟ್‌ಗಳು/ಸ್ಟೋರೇಜ್ ಕ್ಯಾಬಿನೆಟ್‌ಗಳನ್ನು ಒದಗಿಸುವುದು, ಡಾರ್ಕ್ ಪಿಚ್ ಕೊಠಡಿ ನಿರ್ಮಿಸುವುದು, ಅಲ್ಯೂಮಿನಿಯಂ ಬಾಗಿಲುಗಳ ದುರಸ್ತಿ, ಲಿನೋಲಿಯಂ ಫ್ಲೋರಿಂಗ್ ಒದಗಿಸುವುದು, ವಾಲ್ ಟೈಲ್ಸ್ ಒದಗಿಸುವುದು, ಬೂಸ್ಟರ್ ಪಂಪ್‌ನ್ನು ಒದಗಿಸುವುದು ಮತ್ತು ಅಳವಡಿಸುವುದು, ಒಳಗೋಡೆಗಳಿಗೆ ಪೇಂಟಿಂಗ್ ಹಾಗೂ ಕಿಟಕಿ, ಬಾಗಿಲು, ಪೀಠೋಪಕರಣಗಳಿಗೆ ಪಾಲಿಷಿಂಗ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 15 ಕಾಮಗಾರಿಗಳಿಗೆ** ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್**:(http://kppp.karnataka.gov.in)** ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕಾಮಗಾರಿಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ.3.62 ಲಕ್ಷಗಳು, ಗರಿಷ್ಠ ರೂ.32.28 ಲಕ್ಷಗಳು.** ಇಎಂಡಿ: **ಕನಿಷ್ಠ ರೂ.9,100/–, ಗರಿಷ್ಠ ರೂ.40,300/–.** ಕಾಲಾವಧಿ: **02 ರಿಂದ 09 ತಿಂಗಳು (ಮಳೆಗಾಲ ಸೇರಿದಂತೆ).** ಪ್ರತೀ ಕಾಮಗಾರಿಯ ದಸ್ತಾವೇಜು ಬೆಲೆ: **ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **ಕ್ರಸಂ.1,2,5 ಮತ್ತು 6ಕ್ಕೆ 13.11.2026, ಸಂಜೆ 5.00 ಗಂಟೆಯೊಳಗೆ ಹಾಗೂ ಕ್ರಸಂ.3,4,7,8,9,10,11,12,13,14 ಮತ್ತು 15ಕ್ಕೆ 16.11.2026ರಂದು ಮಧ್ಯಾಹ್ನ 12.00 ಗಂಟೆಯೊಳಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ.** ಸಂಕ್ಷಿಪ್ತ ಟೆಂಡರ್ ಕಾಮಗಾರಿಯ ವಿವರಗಳು, ಇಂಡೆಂಟ್ ಸಂಖ್ಯೆಗಳು, ಅಂದಾಜು ಮೊತ್ತ, ಇಎಂಡಿ ಹಾಗೂ ಪಾವತಿಸುವ ವಿಧಾನ, ಮೀಸಲಾತಿ ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್: **http://kppp.karnataka.gov.in** ಮೂಲಕ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ವಾಸಾಸಂಇ/ಉನಿ–ಸಿ.ಪಿ/3637/ಕೆಎಸ್‌ಎಂಸಿಎ/2026–27

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ, ಜಿಲ್ಲಾ ನಗರಾಭಿವೃದ್ಧಿ ಕೋಶ
ರಾಮನಗರ–562159.
Telephone No: 080-27274108, **E-Mail:** ka.ramanagara.dude@gmail.com
ಸಂ.: ರಾಜನಕೋ/ಎಂಯುಎನ್(1)/ಅಮೃತ ನ–4/ಕನಕಪುರ(ಉಳಿತಾಯ)/ಸಿಆರ್/61/2026–27 ದಿನಾಂಕ: 06.11.2026

ಟೆಂಡರ್ ಪ್ರಕಟಣೆ

ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯಡಿ ಕನಕಪುರ ನಗರಸಭೆ ವ್ಯಾಪ್ತಿಯ ವಾರ್ಡ್ ನಂ.13, 9 ಮತ್ತು 12 ರಲ್ಲಿ ತಡೆಗೋಡೆ (Retaining wall) ರಸ್ತೆ ಚರಂಡಿ ಮತ್ತು ಕಲ್ವರ್ಟ್‌ಗಳ ನಿರ್ಮಾಣ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ರವರು ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ.

ಆಸಕ್ತಿವುಳ್ಳ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಕೆ.ಪಿ.ಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇಎಂಡಿ ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಕೆ.ಪಿ.ಪಿ ಪೋರ್ಟಲ್ ಆನ್‌ಲೈನ್ ಮೂಲಕವೇ ಪಾವತಿಸುವುದು.

ಇಂಡೆಂಟ್ ಸಂ: DMA/2026-27/OW/WORK_INDENT63552. ಟೆಂಡರ್‌ಗಿಟ್ಟ ಮೊತ್ತ **ರೂ.81.84 ಲಕ್ಷಗಳಾಗಿರುತ್ತದೆ.** ಇಎಂಡಿ ಮೊತ್ತ **ರೂ. 1,63,360/–** ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **24.11.2026 ರಂದು ಸಂಜೆ: 5:00 ಗಂಟೆಗೆ.** ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ: **25.11.2026 ರಂದು ಸಂಜೆ: 5:10 ಗಂಟೆಗೆ**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ
ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ
DIPR/BSD/378/SA/2026-27

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್
ನೊಂದಣಿ ಕಛೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ 'ಎ' ಕ್ರಾಸ್, 18ನೇ ಮುಖ್ಯ, ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560095, ಕರ್ನಾಟಕ

ಇ–ಹರಾಜು ನೋಟಿಸ್

ಸೆಕ್ಯುರಿಟೈಸೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ (ಸರ್ಫೇಸಿ ಕಾಯ್ದೆ)–2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ರೂಲ್ಸ್–2002ರ ನಿಯಮ 8(6) & 9 (1) ಅಡಿಯಲ್ಲಿ ಮಾರಾಟಕ್ಕೆ ಇ–ಹರಾಜು ನೋಟಿಸ್

ಈ ಕೆಳಗೆ ಸಹಿ ಮಾಡಿರುವ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸರ್ಫೇಸಿ ಕಾಯ್ದೆಯ ಸೆಕ್ಷನ್ 13(4)ರಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದಿರುತ್ತಾರೆ. ಸಾಲಗಾರರಿಗೆ ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಸಾಮಾನ್ಯವಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬ್ಯಾಂಕಿಗೆ ಪಾವತಿಸಲು ಬಾಕಿ ಇರುವ ಮೊತ್ತವನ್ನು ಭರಿಸಿಕೊಳ್ಳುವ ಸಲುವಾಗಿ ಈ ಕೆಳಗೆ ಹೆಸರಿಸಿದ ಖಾತೆಗಳ ಅಡಮಾನ ಆಸ್ತಿಗಳನ್ನು "ಎಲ್ಲಿದೆಯೋ ಅಲ್ಲಿ ಆಧಾರದಲ್ಲಿ" ಮತ್ತು "ಏನು ಇದೆಯೋ ಅದು ಆಧಾರದಲ್ಲಿ" ಈ ಕೆಳಗೆ ನಿರ್ದಿಷ್ಟಪಡಿಸಿದ ದಿನಾಂಕಗಳಂದು ಇ–ಹರಾಜು ನಡೆಸಲಾಗುತ್ತಿದೆ.

ಕ್ರ. ಸಂ.	ಸಾಲ ಖಾತೆ ಸಂಖ್ಯೆ/ ಸಾಲಗಾರರು/ ಸಹ ಸಾಲಗಾರರು/ ಜಾಮೀನುದಾರರ ಹೆಸರು	(1) ದಿನಾಂಕ 13–2ರ ನೋಟಿಸ್ & ದಿನಾಂಕದವರೆಗೆ ಡಿಮ್ಯಾಂಡ್ ಮಾಡಲಾದ ಮೊತ್ತ (2) ಸ್ವಾಧೀನ ದಿನಾಂಕ	ಪ್ರಸ್ತುತ ಬಾಕಿ ಮೊತ್ತ	ಮೀಸಲು ಬೆಲೆ ರೂಪಾಯಿಗಳಲ್ಲಿ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ) ರೂಪಾಯಿಗಳಲ್ಲಿ
ಶಾಖಾ ಕಚೇರಿ: ನಂ. 325, ನೆಲಮಹಡಿ, ಕೆಬಿಎಡಿಬಿ, ನಲ್ಲಕದರನಹಳ್ಳಿ ಗ್ರಾಮ, ರಾಜಗೋಪಾಲನಗರ ಮುಖ್ಯರಸ್ತೆ, 4ನೇ ಫೇಸ್, ಪೀಣ್ಯ, ಬೆಂಗಳೂರು, ಕರ್ನಾಟಕ– 560058					
1.	1115210180000017 1. ಶ್ರೀ ಮುನಿರಾಜು 2. ಶ್ರೀ ರತ್ನಮ್ಮ	(1). 19.07.2021 ಮತ್ತು 18ನೇ ಜುಲೈ 2021ಕ್ಕೆ ಇದ್ದಂತೆ ರೂ. 18,92,913 (ರೂಪಾಯಿ ಹದಿನೆಂಟು ಲಕ್ಷದ ತೊಂಬತ್ತೆರಡು ಸಾವಿರದ ಒಂಬೈನೂರ ಹದಿಮೂರು ಮಾತ್ರ) (2) ಸಾಂಕೇತಿಕ ಸ್ವಾಧೀನ 10.03.2022 ಭೌತಿಕ ಸ್ವಾಧೀನ 18.12.2023	09.11.2026ಕ್ಕೆ ಇದ್ದಂತೆ ರೂ. 35,86,557 (ರೂಪಾಯಿ ಮೂವತ್ತೈದು ಲಕ್ಷದ ಎಂಭತ್ತಾರು ಸಾವಿರದ ಐದು ನೂರ ಐವತ್ತೇಳು ಮಾತ್ರ)	₹ 20,25,000/- (ರೂಪಾಯಿ ಇಪ್ಪತ್ತು ಲಕ್ಷದ ಇಪ್ಪತ್ತೈದು ಸಾವಿರ ಮಾತ್ರ)	₹ 2,02,500/- (ರೂಪಾಯಿ ಎರಡು ಲಕ್ಷದ ಎರಡು ಸಾವಿರದ ಐದುನೂರು ಮಾತ್ರ)

ಆಸ್ತಿಯ ಶೆಡ್ಯೂಲ್: ಖಾನೇಶ್ಮರಿ ನಂ. 60/37, ಇ–ಖಾತೆ ಸಂಖ್ಯೆ 150300701100620693 ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ವಿಳಾಸ: **ಓಬನಾಯಕನಹಳ್ಳಿ ಗ್ರಾಮ, ವಿಶ್ವೇಶ್ವರಪುರ ಗ್ರಾಮಪಂಚಾಯ್ತಿ, ಕಸಬಾ ಹೋಬಳಿ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮೀಣ ಜಿಲ್ಲೆ.** ಅಳತೆ– ಪೂರ್ವದಿಂದ ಪಶ್ಚಿಮಕ್ಕೆ: 9.144 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 12.192 ಮೀಟರ್. ಒಟ್ಟು ವಿಸ್ತೀರ್ಣ: 111.48 ಚದರ ಮೀಟರ್. ಗಡಿಗಳು– ಪೂರ್ವಕ್ಕೆ: ಪ್ರಕಾಶ್ ರೆಡ್ಡಿ ಆಸ್ತಿ, ಪಶ್ಚಿಮಕ್ಕೆ: ಇದೇ ಆಸ್ತಿಯ ಉಳಿಕೆ ಭಾಗ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಇದೇ ಆಸ್ತಿಯ ಉಳಿಕೆ ಭಾಗ. ಭೂಮಿ ಮತ್ತು ಕಟ್ಟಡ ಹಾಗೂ ಹೊಂದಿಕೊಂಡಿರುವ ಇತರ ಎಲ್ಲ ಜೋಡಣೆಗಳು.
ಋಣಭಾರಗಳ ಪಟ್ಟಿ: ಸೇಲ್ ಡೀಡ್ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕಿನ ಚಾರ್ಜ್‌ಗಾಗಿ ನೋಂದಾಯಿಸಲ್ಪಟ್ಟಿದ್ದು, ಯಾವುದೇ ಸೇಲ್‌ಡೀಡ್ ಅಮಾನ್ಯವಾಗಿರುತ್ತದೆ ಮತ್ತು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಮೊದಲ ಮೌಲಿಕ ಹಾಗೂ ಪ್ರಾಥಮಿಕ ಚಾರ್ಜ್ ಅನ್ನು ಆಸ್ತಿಯ ಮೇಲೆ ಹೊಂದಿರುತ್ತಾರೆ.

ಶಾಖಾ ಕಚೇರಿ: ನೆಲಮಹಡಿ, ದ್ವಾರಕ ಆರ್ಕೇಡ್, ಡಿ.ನಂ. 6/4/63, ಗಂಗಮ್ಮ ಗುಡಿ ರಸ್ತೆ, ಇಂಡಿಯನ್ ಕ್ಲಿನಿಕ್ ಎದುರು, ವಿವಿ ಲೇಔಟ್, ಎಂ.ವಿ.ಬಡಾವಣೆ, ಹೊಸಕೋಟೆ, ಬೆಂಗಳೂರು, ಕರ್ನಾಟಕ–562114					
2.	1633210080000032 / 1. ಶ್ರೀ ಅಲ್ಲಾ ಬಕ್ಷ್ 2. ಶ್ರೀಮತಿ ಸುಲ್ತಾನಾ 3. ಶ್ರೀಮತಿ ದಿಲ್‌ಶಾದ್	(1). 17.07.2021 ಮತ್ತು 16ನೇ ಜುಲೈ 2021ಕ್ಕೆ ಇದ್ದಂತೆ ರೂ. 8,87,645 (ರೂಪಾಯಿ ಎಂಟು ಲಕ್ಷದ ಎಂಭತ್ತೇಳು ಸಾವಿರದ ಆರುನೂರ ನಲುವತ್ತೈದುಮಾತ್ರ) (2) ಸಾಂಕೇತಿಕ ಸ್ವಾಧೀನ 21.02.2022 ಮತ್ತು ಭೌತಿಕ ಸ್ವಾಧೀನ 16.07.2026	09.11.2026ಕ್ಕೆ ಇದ್ದಂತೆ ರೂ. 15,00,000 (ರೂಪಾಯಿ ಹದಿನೈದು ಲಕ್ಷ ಮಾತ್ರ)	₹ 8,80,000/- (ರೂಪಾಯಿ ಎಂಟು ಲಕ್ಷದ ಎಂಬತ್ತು ಸಾವಿರ ಮಾತ್ರ)	₹ 88,000/- (ರೂಪಾಯಿ ಎಂಬತ್ತೆಂಟು ಸಾವಿರ ಮಾತ್ರ)

ಆಸ್ತಿಯ ವಿವರಣೆ/ ಶೆಡ್ಯೂಲ್: **ಮುನ್ಸಿಪಲ್ ಖಾತೆ ಸಂಖ್ಯೆ 7606/444/2, ವಾರ್ಡ್ ನಂ. 26, ಸಂತೋಷ್ ನಗರ, ಶಿಡ್ಲಘಟ್ಟ ನಗರಸಭೆ, ಶಿಡ್ಲಘಟ್ಟ ಗ್ರಾಮ, ಕಸಬಾ ಹೋಬಳಿ, ಶಿಡ್ಲಘಟ್ಟ ತಾಲೂಕು, ಚಿಕ್ಕಬಳ್ಳಾಪುರ ಜಿಲ್ಲೆ–562105** ವಿಳಾಸದಲ್ಲಿರುವ ಭೂಮಿ ಮತ್ತು ಕಟ್ಟಡದ ಎಲ್ಲ ತುಂಡು ಮತ್ತು ತುಣುಕುಗಳು. ವಿಸ್ತೀರ್ಣ: ಪೂರ್ವ–ಪಶ್ಚಿಮ: 25 ಅಡಿ ಮತ್ತು ಉತ್ತರ–ದಕ್ಷಿಣ: 30 ಅಡಿ, ಒಟ್ಟು 700 ಚದರ ಅಡಿ (ಇತರ ಎಲ್ಲಾ ಅಭಿವೃದ್ಧಿಗೊಂಡದ್ದು ಸೇರಿ) ಮತ್ತು ಗಡಿಗಳು– ಪೂರ್ವಕ್ಕೆ: ಬಾಬು ಅವರ ಆಸ್ತಿ, ಪಶ್ಚಿಮಕ್ಕೆ: ಇಬ್ರಾಹಿಂ ಅವರ ಮನೆ, ದಕ್ಷಿಣಕ್ಕೆ: ಮೈದಾನ (ಆಟದ ಮೈದಾನ), ಉತ್ತರಕ್ಕೆ: ರಸ್ತೆ & ಬಾಬು ಅವರ ಆಸ್ತಿ.

ಇ–ಹರಾಜು ದಿನಾಂಕ ಮತ್ತು ಸಮಯ: 26.11.2026 ಬೆಳಿಗ್ಗೆ: 11.00 ರಿಂದ ಮಧ್ಯಾಹ್ನ 12.00

ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ:	ಆಸ್ತಿಯ ವೀಕ್ಷಣೆ ದಿನಾಂಕ ಮತ್ತು ಸಮಯ:
25.11.2026 ಅಥವಾ ಅದಕ್ಕೂ ಮೊದಲು ಬೆಳಿಗ್ಗೆ 10.00 ರಿಂದ ಸಂಜೆ 5.00	24.11.2026ರ ಬೆಳಿಗ್ಗೆ 10.00 ರಿಂದ ಸಂಜೆ 5.00

ಹೆಚ್ಚಿನ ವಿವರಗಳಿಗೆ ಬ್ಯಾಂಕ್‌ನ ಅಧಿಕೃತ ಅಧಿಕಾರಿಯನ್ನು ಸಂಪರ್ಕಿಸಿ: ಕ್ರಮಸಂಖ್ಯೆ: 1– ಶ್ರೀ ಅರುಣ್ ಕುಮಾರ್, ಮೊಬೈಲ್: 91481 98820/ ಶ್ರೀ ಪುಷ್ಪಕನಾಥ್– ಮೊಬೈಲ್: 98431 14222/ ಶ್ರೀ ಮನೋಹರ್– ಮೊಬೈಲ್: 8197471831.
ಕ್ರಮಸಂಖ್ಯೆ 2: ಶ್ರೀ ಗಂಗಾಧರ್– 7019119973/ ಶ್ರೀ ತಿಜೋ ಸಾಜನ್– 7845192961

ಹರಾಜನ್ನು "ಎಲ್ಲಿದೆಯೋ ಅಲ್ಲಿ" ಮತ್ತು "ಏನಿದೆಯೋ ಅದು ಆಧಾರದಲ್ಲಿ" ನಡೆಸಲಾಗುತ್ತದೆ.
ಇ–ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ಅನುಮೋದಿತ ಇ–ಹರಾಜು ಸೇವಾ ಪೂರೈಕೆದಾರರಾದ ಮೆಸಸ್ ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮೂಲಕ ನಡೆಸಲಾಗುತ್ತದೆ. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊಬೈಲ್ ನಂ. 7418281709). ಉದ್ದೇಶಿತ ಬಿಡ್ಡುದಾರರು ಆಸ್ತಿ ವಿವರಗಳಿಗೆ https://www.bankeauctions.com ಅಥವಾ https://www/ujjivansfb.in/e-auctionಗೆ ಭೇಟಿ ನೀಡಲು ಸಲಹೆ ಮಾಡಲಾಗಿದೆ ಮತ್ತು ಬಿಡ್‌ನಲ್ಲಿ ಭಾಗವಹಿಸಲು ಅವರು ತಮ್ಮ ಹೆಸರುಗಳನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಬೇಕು ಮತ್ತು ಉಚಿತವಾಗಿ ತಮ್ಮ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಸಂಭಾವ್ಯ ಬಿಡ್ಡುದಾರರು ಇ–ಹರಾಜಿನ ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾಪೂರೈಕೆದಾರರಾದ ಮೆಸಸ್ ಸಿ1 ಇಂಡಿಯಾ ಪ್ರೈವೇಟ್ ಲಿಮಿಟೆಡ್ ಅವರಿಂದ ಪಡೆಯಬಹುದು. ಹೆಲ್ಪ್‌ಲೈನ್ ನಂ. 72919 18824, 25, 26. ಬೆಂಬಲ ಇ–ಮೇಲ್ ಐಡಿ: support@bankeauctions.com mailto:support@bankeauctions.com ಹರಾಜು ಪೋರ್ಟಲ್: https://www.bankauctions.co ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ನಮ್ಮ ಬ್ಯಾಂಕ್/ ಭದ್ರತಾ ಸಾಲದಾರರ ವೆಬ್‌ಸೈಟ್ ಅಂದರೆ: https://www/ujjivansfb.in/e-auctions/ https://www.bankeauctions.com ವೀಕ್ಷಿಸಬಹುದು.

ಸಹಿ/–
ದಿನಾಂಕ: 10.11.2026 ಅಧಿಕೃತ ಅಧಿಕಾರಿ ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್